‘‘ಷೀನಾ... ಇದನ್ನ ನೋಡಿದಿಯಾ?...’’

ಆತ ಜೇಬಿನಿಂದ ಮತ್ತೊಂದು ತೆಗೆದು ಅವಳಿಗೆ ತೋರಿಸಿದ. ಅವಳು ಹೆದರಿ ಕಂಗಲಾಗಿ ಹೋದಳು. ಅವಳು ಓಡಲು ಯತ್ನಿಸಿದಾಗ ಆತ ಹಿಂದಿನಿಂದ ಸೈಕಲಲ್ಲಿ ಬಂದು ಹಿಡಿದುಕೊಂಡ.

‘‘ನಾನು ಸ್ಕೂಲಿಗೆ ಹೋಗಬೇಕು...’’

‘‘ಹೋಗಬಹುದಲ್ಲ... ಹೋಗಬೇಡಾಂತ ಯಾರು ಹೇಳಿದ್ರು?... ಆದರೆ, ಅದಕ್ಕೂ ಮೊದಲು ಸ್ಟುಡಿಯೊ ಕಡೆ ಒಮ್ಮೆ ಬರಬೇಕಾಗತ್ತೆ...’’

‘‘ಇಲ್ಲ... ಸತ್ರೂ ನಾನು ಬರೋದಿಲ್ಲ...’’

‘‘ಬರದೇ ಇದ್ರೆ ಬೇಡಾ... ನಾನು ಈ ಫೋಟೊವನ್ನು ನಿನ್ನ ಸ್ಕೂಲಿನ ಗೋಡೆ ಮೇಲೆ ಈಗಲೇ ಹೋಗಿ ಅಂಟಿಸಿಬಿಡ್ತಿನಿ...’’

